ಕರ್ನಾಟಕ ವಿಧಾನಸಭೆ

ಗುರುವಾರ 10ನೇ ಜೂನ್ 2004ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಂಡಿತು

ಹಂಗಾಮಿ ಅಧ್ಯಕ್ಷರು: (ಶ್ರೀ ಆರ್.ವಿ. ದೇಶಪಾಂಡೆ)

ಪೀಠವನ್ನು ಅಲಂಕರಿಸಿದ್ದರು

1. ಸದಸ್ಯರಿಂದ ಪ್ರಮಾಣವಚನ ಅಥವಾ ಪ್ರತಿಜ್ಞಾ ವಚನ ಸ್ವೀಕಾರ

ಹಂಗಾಮಿ ಅಧ್ಯಕ್ಷರು:– ಈಗ ನೂತನ ಸದಸ್ಯರಿಂದ ಪ್ರಮಾಣ ವಚನ·ಸ್ವೀಕಾರ

ಶ್ರೀ ಟಿ. ಗುರುಸಿದ್ದನಗೌಡ (ಜಗಳೂರು):– ಶ್ರೀ ಟಿ. ಗುರುಸಿದ್ದನಗೌಡ ಎಂಬ ಹೆಸರಿನವನಾದ ನಾನು ವಿಧಾನಸಭೆಯ ಸದಸ್ಯನಾಗಿ ನಿರ್ವಾಚನ ಹೊಂದಿದವನಾಗಿ ವಿಧಿದ್ವಾರ ಸ್ಥಾಪಿತವಾದ ಭಾರತದ ಸಂವಿಧಾನದ ವಿಷಯದಲ್ಲಿ ಶ್ರದ್ಧೆಯಿಂದಲೂ, ನಿಷ್ಠೆಯಿಂದಲೂ ಕೂಡಿರುತ್ತೇನೆಂದೂ, ನಾನು ಭಾರತದ ಪರಮಾಧಿಕಾರವನ್ನು ಮತ್ತು ಸಮಗ್ರತೆಯನ್ನು ಸಮರ್ಥಿಸುತ್ತೇನೆಂದೂ, ನಾನು ಈಗ ಕೈಗೊಳ್ಳಲಿರುವ ಕರ್ತವ್ಯವನ್ನು ಶ್ರದ್ಧಾ ಪೂರ್ವಕವಾಗಿ ನಿರ್ವಹಿಸುತ್ತೇನೆಂದು ಭಗವಂತನ ಹೆಸರಿನ ಮೇಲೆ ಪ್ರಮಾಣ ಮಾಡುತ್ತೇನೆ. ನಂತರ ಈ ಕೆಳಕಂಡ ಮಾನ್ಯ ಸದಸ್ಯರುಗಳು ಕನ್ನಡ ಇತರ ಭಾಷೆಗಳಲ್ಲಿ, ಭಗವಂತನ ಹೆಸರಿನ ಮೇಲೆ ಸತ್ಯ ನಿಷ್ಠೆಯಿಂದ ಪ್ರತಿಜ್ಞೆ ಸ್ವೀಕಾರ ಮಾಡಿದರು:–

ಸದಸ್ಯರ ಹೆಸರು	ಕ್ಷೇತ್ರ	ಪ್ರಮಾಣ ವಚನ ಸ್ವೀಕರಿಸಿದ ಭಾಷೆ
ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ	(ಕುಂದಾಪುರ)	ಕನ್ನಡ
ಶ್ರೀ ಕಾಕಾ ಸಾಹೇಬ ಪಾಂಡುರಂಗ ಪಾಟೀಲ್	(ನಿಪ್ಪಾಣಿ)	ಆಂಗ್ಲ
ಶ್ರೀ ಹೆಚ್.ಕೆ. ಕುಮಾರಸ್ವಾಮಿ	(ಬೇಲೂರು)	ಕನ್ನಡ
ಶ್ರೀ ವಿ. ಸೋಮಣ್ಣ	(ಬಿನ್ನಿಪೇಟೆ)	ಕನ್ನಡ
ಶ್ರೀ ಎಂ.ಪಿ. ಕುಮಾರ್ ಸ್ವಾಮಿ	(ಮೂಡಿಗೆರೆ)	ಕನ್ನಡ

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಮಾನ್ಯ ಅಧ್ಯಕ್ಷರೆ ನಾವು ನಿನ್ನೆಯೇ ರೂಲಿಂಗ್ ಕೊಡಿ ಎಂದು ಕೇಳಿದೆವು, ನೀವು ರೂಲಿಂಗ್ ಕೊಡಲಿಲ್ಲ.

ಹಂಗಾಮಿ ಅಧ್ಯಕ್ಷರು:– ಅವರು ಮೊದಲು ಭಗವಂತನ ಹೆಸರು ಹೇಳಿದ್ದಾರೆ.

ಶ್ರೀ ಹೆಚ್.ಡಿ. ಬಸವರಾಜ್:– ಮಾನ್ಯ ಅಧ್ಯಕ್ಷರೆ, ನಾವು ಭಗವಂತನನ್ನು ಯಾವ ಸ್ವರೂಪದಲ್ಲಿ ನೋಡುತ್ತಾ ಇದ್ದವೋ, ಅದನ್ನು ಇಲ್ಲಿ ಉಲ್ಲೇಖ ಮಾಡಿ, ಪ್ರಮಾಣವಚನ ತೆಗೆದುಕೊಳ್ಳುತ್ತೇವೆಂದು ಹೇಳಿದರೆ, ಅದಕ್ಕೆ ಏಕೆ ಆಕ್ಷೇಪಣೆ ಮಾಡಬೇಕು?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಇಲ್ಲಿ ನಾವು ಸಂವಿಧಾನ ಬದ್ಧವಾಗಿ ನಡೆದುಕೊಳ್ಳಬೇಕು. ಅವರ ವೈಯಕ್ತಿಕವಾದಂಥ ಭಾವನೆಗಳನ್ನು ಭದ್ರವಾಗಿ ಇಟ್ಟುಕೊಳ್ಳಲಿ.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ:– ಸದಸ್ಯರ ಭಾವನೆಗಳು ಸದನದ ಹೊರಗಡೆ ಇರಲಿ. ಇಲ್ಲಿ ಸಂವಿಧಾನ ಇದೆ. ಕಾನೂನು ಇದೆ.